ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,
ಕೆ.ಆರ್.ಪೇಟೆ.

| | | |
|---|---|---|
| ಸಿ.ಸಿ. ನಂಬರ್ **402/2019** | ಸಿ.ಡಬ್ಲ್ಯೂ-**1** | ಪಿ.ಡಬ್ಲ್ಯೂ-**1** |

| | |
|---|---|
| ಸಾಕ್ಷಿದಾರರ ಹೆಸರು | ರಮೇಶ |
| ತಂದೆಯ ಹೆಸರು | ಶಿವಲಿಂಗೇಗೌಡ |
| ವಯಸ್ಸು | **45** ವರ್ಷ |
| ಉದ್ಯೋಗ | ಕೆ.ಎಸ್.ಆರ್.ಟಿ.ಸಿ ಚಾಲಕ |
| ವಾಸ ಸ್ಥಳ | ಅಕ್ಕಿಹೆಬ್ಬಾಳು ಗ್ರಾಮ,<br>ಕೆ.ಆರ್.ಪೇಟೆ ತಾಲ್ಲೂಕು |

ದಿನಾಂಕ **: 23.12.2024** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಮಾಡಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ

ನಾನು ಕಳೆದ 15 ವರ್ಷಗಳಿಂದ ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ದಿನಾಂಕ 12-12-2018 ರಂದು ನಾನು ಕೆ.ಆರ್.ಪೇಟೆ ಡಿಪೋದ ಬಸ್ ಸಂಖ್ಯೆ ಕೆ.ಎ.11-ಎಫ್-0004 ಯ ಬಸ್ಸಿನ ಚಾಲಕನಾಗಿ ಕರ್ತವ್ಯದ ಮೇಲೆ ಇದ್ದೇನು. ಚಾಸಾ-2 ರವರು ಸದರಿ ಬಸ್ಸಿನ ನಿರ್ವಾಹನಕನಾಗಿದ್ದರು. ಸದರಿ ದಿನ ನಾವು ಮಧ್ಯಾಹ್ನ ಕೆ.ಆರ್.ಪೇಟೆ ಬಿಟ್ಟು 12-50 ಸಮಯಕ್ಕೆ ಹರಿಹರಪುರದ 2 ನೇ ಬಸ್ ನಿಲ್ದಾಣದ ಹತ್ತಿರ ವಾಹನವನ್ನು ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋರಾಡುವಾಗ ಆರೋಪಿಯು ಅಲ್ಲಿಗೆ ಬಂದು ಎಮ್ಮೆಗಳನ್ನು ಬಸ್ಸಿಗೆ ಅಡ್ಡಹಾಕಿ ನನ್ನ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕೋಲಿನಿಂದ ನನ್ನ ಬಲ ಭುಜಕ್ಕೆ ಹೊಡೆದು ನೋವುಂಟು ಮಾಡಿರುತ್ತಾರೆ. ಆರೋಪಿಯು ನನಗೆ ಮತ್ತೊಮ್ಮೆ ಈ ರೂಟಿನಲ್ಲಿ ಬಂದರೆ ನನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ಆಗ ಚಾಸಾ-2 ರಿಂದ 4 ರವರು ಜಗಳ ಬಿಡಿಸಿರುತ್ತಾರೆ. ಆರೋಪಿಯು ಬಸ್ಸನ್ನು ಅಡ್ಡಹಾಕಿ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ. ನಂತರ ನಾನು ಮೇಲಾಧಿಕಾರಿಗಳಿಗೆ ತಿಳಿಸಿ ದೂರನ್ನು ದಾಖಲಿಸಿರುತ್ತೇನೆ. ನಂತರ ನಾನು ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಗಲಾಟೆಯಾದ ಎರಡು ದಿನದ ನಂತರ ಕೃತ್ಯ ಸ್ಥಳಕ್ಕೆ ಭೇಟಿಕೊಟ್ಟು ನಾನು ತೋರಿಸಿದ ಸ್ಥಳದಲ್ಲಿ ಗ್ರಾಮಸ್ಥರ ಸಮಕ್ಷಮ ಬೆಳಿಗ್ಗೆ 10-00 ರಿಂದ 10-45 ಗಂಟೆಯವರೆಗೆ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಮಹಜರ್ ಕಾಲಕ್ಕೆ ಪೊಲೀಸರು ಒಂದು ದೊಣ್ಣೆಯನ್ನು ವಶ ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಮಹಜರನ್ನು ನಿ.ಪಿ-2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಎರಡು ಪೋಟೋಗಳನ್ನು ನೋಡಿ ಗುರುಸಿದ್ದು ಅದನ್ನು ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲು:</u> ಆರೋಪಿ ಪರ ವಕೀಲರಿಂದ

ನಾನು ಬಸ್ಸನ್ನು ಡಿಪೋದಿಂದ ತೆಗೆದುಕೊಳ್ಳುವಾಗ ಲಾಗ್ ಶೀಟನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಸದರಿ ಲಾಗ್ ಶೀಟನಲ್ಲಿ ಚಾಲಕ ಮತ್ತು ನಿರ್ವಾಹಕನ ಹೆಸರನ್ನು ಬರೆದಿರುತ್ತಾರೆ ಎಂದರೆ ಸರಿ. ಅದೇ ರೀತಿ ಬಸ್ಸನ್ನು ಎಷ್ಟು ಗಂಟೆಗೆ ಡಿಪೋದಿಂದ ತೆಗೆದುಕೊಂಡಿರುತ್ತೇವೆ ಎಂದು ಬರೆದಿರುತ್ತದೆ ಎಂದರೆ ಸರಿ. ಲಾಗ್ ಶೀಟನಲ್ಲಿ ಕೆ.ಆರ್.ಪೇಟೆ ಮತ್ತು ಮಾರ್ಗ ಮಧ್ಯದ ಊರಿನ ಬಸ್ಸ ನಿಲ್ದಾಣಕ್ಕೆ ಎಷ್ಟು ಗಂಟೆಗೆ ತಲುಪಬೇಕು ಮತ್ತು ಬಿಡಬೇಕು ಎಂದು ಬರೆದಿರುತ್ತದೆ ಎಂದರೆ ಸರಿ. ಲಾಗ್ ಶೀಟ್ ನಲ್ಲಿ ಬಸ್ ಸಂಖ್ಯೆ ಕೆ.ಎ.-11 ಎಫ್-0049 ಎಂದು ಬರೆದಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಬಸ್ ಸಂಖ್ಯೆ ತಪ್ಪಾಗಿ ಪ್ರಿಂಟ್ ಆಗಿದ್ದರಿಂದ ಅದರ ಪಕ್ಕ 0004 ಎಂದು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ತಪ್ಪಾಗಿ ನಮೂದಾಗಿದ ಜಾಗದಲ್ಲಿ ತಿದ್ದುಪಡಿ ಸಹಿ ಮಾಡುತ್ತಾರೆ ಎಂದರೆ ಸರಿ. ಕೆ.ಆರ್.ಪೇಟೆ ಬಸ್ ನಿಲ್ದಾಣ ಬಿಡುವಾಗ ಟಿ.ಸಿಯವರು ಟ್ರಿಪ್ ಶೀಟ್ ಬರೆದುಕೊಡುತ್ತಾರೆ ಎಂದರೆ ಸರಿ. ಟ್ರಿಪ್ ಶೀಟ್ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಲಾಗ್ ಶೀಟ್ ನಲ್ಲಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನ ನಾವು ಕೆ.ಆರ್.ಪೇಟೆ ಬಸ್ ನಿಲ್ದಾಣವನ್ನು ಮದ್ಯಾಹ್ನ 12-45 ಗಂಟೆಗೆ ಬಿಟ್ಟಿರುತ್ತೇವೆ ಎಂದರೆ ಸರಿ. ಕೆ.ಆರ್.ಪೇಟೆಯಿಂದ ಹರಿಹರಪುರಕ್ಕೆ ಹೋಗಲು 15 ನಿಮಿಷ ಬೇಕಾಗುತ್ತದೆ. ಬಸ್ಸಿನಲ್ಲಿ ಸಾಕಷ್ಟು ಪ್ರಯಾಣಿಕರು ಇದ್ದರು ಎಂದರೆ ಸರಿ.

ನನ್ನ ಸ್ವಂತ ಊರು ಅಕ್ಕಿಹೆಬ್ಬಾಳು ಎಂದರೆ ಸರಿ. ಅಕ್ಕಿಹೆಬ್ಬಾಳು ಮತ್ತು ಹರಿಹರಪುರದ ನಡುವೆ ಸಾಕಷ್ಟು ಸಂಬಂಧ ಇವೆ ಎಂದರೆ ಸರಿ. ಆದ ಕಾರಣ ಎರಡು ಗ್ರಾಮದ ಜನರ ಹೆಸರು ಮತ್ತು ಜನಾಂಗ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿದಿನ ಬಸ್ಸನ್ನು ಅತೀವೇಗವಾಗಿ ಚಾಲನೆ ಮಾಡುವುದರಿಂದ ಜನರು ಮತ್ತು ಪ್ರಯಾಣಿಕರು ನನಗೆ ಬಸ್ಸನ್ನು ನಿಧಾನವಾಗಿ ಚಾಲನೆ ಮಾಡಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನೇ ಸದರಿ ದಿನ ಬಸ್ಸನ್ನು ಅತೀವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಎಮ್ಮೆಗೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಡಿಕ್ಕಿ ಪಡಿಸಿದ ಪರಿಣಾಮ ಎಮ್ಮೆಯ ಕಾಲು ಮುರಿದಿರುತ್ತದೆ ಎಂದರೆ ಸರಿಯಲ್ಲ. ನಾನು ತಪ್ಪು ಮಾಡಿದ್ದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿಯ ಮೇಲೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ, ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ನನಗೆ ದೊಣ್ಣೆಯಿಂದ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:</u> ಇಲ್ಲ

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.